# ಹೆಣ್ಮಕ್ಳೆ ಸ್ಟ್ರಾಂಗು!



## ದ್ಯುತಿ ಓಟದ ಗತಿ!

ಅಕ್ಕ ಸರಸ್ವತಿ ಚಾಂದ್ ರಾಜ್ಯಮಟ್ಟದ ಓಟದಲ್ಲಿ ಗೆದ್ದದ್ದನ್ನು ಬಾಲ್ಯದಲ್ಲಿ ನೋಡಿ ದ್ಯುತಿ ಚಾಂದ್ ಕಣ್ಣು ಅರಳಿತ್ತು. ಈ ವರ್ಷ ಜಾಗತಿಕ ಸ್ಪರ್ಧೆಯಲ್ಲಿ 100 ಮೀ. ಓಟದಲ್ಲಿ ಬಂಗಾರ ಗೆಲ್ಲುವ ಮೂಲಕ ದೇಶದ ಕ್ರೀಡಾಭಿಮಾನಿಗಳ ಕಣ್ಣರಳುವಂತೆ ಮಾಡಿದ್ದು ಅದೇ ದ್ಯುತಿ.

ಇಟಲಿಯ ನಪೋಲಿಯಲ್ಲಿ ನಡೆದ 30ನೇ 'ಸಮ್ಮರ್ ಯೂನಿವರ್ಸಿಟಿ ಗೇಮ್ಸ್'ನಲ್ಲಿ ಇದೇ ವರ್ಷ ಜುಲೈನಲ್ಲಿ ಈ ಹುಡುಗಿ ಚಿನ್ನದ ನಗೆ ಬೀರಿದ್ದು. ವಯಸ್ಸು ಇನ್ನೂ ಇಪ್ಪತ್ತಮೂರು. 11.32 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದ ದ್ಯುತಿ, ಸ್ಪರ್ಧೆಯ ಯಾವ ಹಂತದಲ್ಲೂ ಮುನ್ನಡೆ ಬಿಟ್ಟುಕೊಡಲಿಲ್ಲ. ಹಿಮಾ ದಾಸ್ ಅವರನ್ನು ಹೊರತುಪಡಿಸಿದರೆ ಜಾಗತಿಕ ಮಟ್ಟದ ಸ್ಪರ್ಧೆಯೊಂದರಲ್ಲಿ ಚಿನ್ನ ಗೆದ್ದ ಭಾರತೀಯ ಹೆಣ್ಣುಮಗಳು ಇವರೇ.

ತಾನು ಸಲಿಂಗಿ ಎಂದು ಭಿಡೆಯಿಲ್ಲದೆ ಹೇಳಿಕೊಂಡು ಮೇ ತಿಂಗಳಲ್ಲಿ ಸುದ್ದಿಯಾಗಿದ್ದ ದ್ಯುತಿ, ಎರಡೇ ತಿಂಗಳ ನಂತರ ವೇಗವಾಗಿ ಓಡಿ ಸದ್ದು ಮಾಡಿದ್ದು ವಿಶೇಷ. ಬಡತನ ರೇಖೆಗಿಂತ ಕೆಳಗಿರುವ ನೇಕಾರರ ಕುಟುಂಬದ, ಒಡಿಶಾದ ಕುಡಿ. 2018ರಲ್ಲಿ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ. ಈ ವರ್ಷ ಬಂಗಾರ. ಮೆಟ್ಟಿಲೇರುವುದು ಎಂದರೆ ಇದೇ ಅಲ್ಲವೇ? ■

4



## ಸಿಂಧು... ಇನ್ನೂ ಒಂದು

21–7, 21–7 ಈ ಸ್ಕೋರ್ ಕಣ್ಣುಮುಚ್ಚಿದಾಗ ಒಂದಿಷ್ಟು ದಿನ ಪಿ.ವಿ. ಸಿಂಧು ಅವರಿಗೆ ಮುದಕೊಟ್ಟಿರಲಿಕ್ಕೆ ಸಾಕು. 2019ರ ಆಗಸ್ಟ್ 25 ಅವರಿಗೆ ಮರೆಯಲಾಗದ ದಿನ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರು 'ಬಂಗಾರದ ಬಾಲೆ'ಯಾದ ದಿನ.

ಆರು ವಿಶ್ವ ಚಾಂಪಿಯನ್‌ಗಳಿಂದ ಐದು ಪದಕಗಳನ್ನು ಗೆದ್ದಿರುವ ವಿಶ್ವದ ಏಕೈಕ ಆಟಗಾರ್ತಿ ಎಂಬ ಗೌರವವೂ ಅವರದ್ದಾಯಿತು. ಪದೇ ಪದೇ ಚಳ್ಳೆಹಣ್ಣು ತಿನ್ನಿಸಿರುವ ಎದುರಾಳಿ, ಜಪಾನಿನ ನೊಜೊಮಿ ಒಕುಹರಾ ಎದುರೇ ಅಂಥದೊಂದು ಗೆಲುವನ್ನು ಎದ್ದುಕಾಣುವಂತೆ ದಾಖಲಿಸಿದ್ದು ಅಗ್ಗಳಿಕೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 2013ರಲ್ಲಿ ಕಂಚು, 2017 ಹಾಗೂ 2018ರಲ್ಲಿ ಬೆಳ್ಳಿ ಗೆದ್ದಿದ್ದ ಅವರು, 'ದೊಡ್ಡ ಟೂರ್ನಿಗಳ ಫೈನಲ್‌ಗಳಲ್ಲಿ ಸತತವಾಗಿ ಸೋಲುವುದು ಹತಾಶಭಾವ ಮೂಡಿಸುತ್ತದೆ' ಎಂದು ಬೇಸರ ಪಟ್ಟುಕೊಂಡಿದ್ದರು. ರಿಯೊ ಒಲಿಂಪಿಕ್ಸ್‌ನಲ್ಲೂ ಫೈನಲ್ಸ್‌ನಲ್ಲಿ ಮುಗ್ಗರಿಸಿದ್ದರು. ಚಿನ್ನದ ಪದಕ ಗೆಲ್ಲಬೇಕೆಂದು ಸಂಕಲ್ಪ ಮಾಡಿದ್ದೇ ಆಗ. ಅದೀಗ ಫಲ ನೀಡಿತು.

ಮನೆಯಿಂದ 56 ಕಿ.ಮೀ. ದೂರವಿದ್ದ 'ಪುಲ್ಲೇಲಾ ಗೋಪಿಚಂದ್ ಬ್ಯಾಡ್ಮಿಂಟನ್ ಅಕಾಡೆಮಿ'ಗೆ ಅಪ್ಪ ಪುಸರ್ಲಾ ವೆಂಕಟರಮಣ ಬೆಳಗಿನ ಜಾವ ಮಗಳನ್ನು ಎಬ್ಬಿಸಿಕೊಂಡು ಕರೆದುಕೊಂಡುಹೋಗುತ್ತಿದ್ದರು. ಆಗ ನೆಟ್ಟ ಶ್ರಮದ ಗಿಡವೀಗ ಕೊಟ್ಟಿರುವ ಫಲ ಬಲು ಸಿಹಿ. ■

ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.